‘ಆಮೇಲೆ ನಮಗವರನ್ನು ಅಟ್ಟಿಸಿಕೊಂಡು ಹೋಗೋವಷ್ಟು ಧೈರ್ಯ ಬರಲಿಲ್ಲ.’

‘ಅಂದ್ರೆ... ಪ್ರೊಫೆಸರನ್ನು ಕೊಲ್ಲುವ ಯೋಚನೆ ಬಿಟ್ಟುಬಿಟ್ಟೆಯಾ? ಹೇಡಿ ನೀನು!’

‘ಹೇಡಿ ಅಂತಲ್ಲ.’

‘ಇನ್ನೇನು? ಅವರನ್ನಲ್ಲದಿದ್ರೆ ಅವರ ಹೆಂಡ್ತೀನಾದ್ರೂ ಕೊಂದು ಸೇಡು ತೀರಿಸ್ಲಿಕ್ಕೆ ಹೊರಟೆ.’

‘ಇಲ್ಲ, ನಾನವಳನ್ನು ಕೊಲೆ ಮಾಡಿಲ್ಲ.’

‘ಮೇಲಾಗಿ ಅತ್ಯಾಚಾರಾನೂ ಮಾಡ್ದೆ.’

‘ಇಲ್ಲ. ನಾ ಅತ್ಯಾಚಾರ ಮಾಡ್ಲಿಲ್ಲ, ಕೊಲೇನೂ ಮಾಡ್ಲಿಲ್ಲ.’

‘ಚಿನ್ನದ ಗಂಟನ್ನು ಬಾರಯ್ಯ ಮಹಾರಾಯಾಂತ ಕರ್ದು ಕೈಯಲ್ಲಿಟ್ರಾ?’

‘ಚಿನ್ನ ಕದ್ದದ್ದು ಹೌದು. ಆದರೆ...’

‘ಅದು ಮಾಡಿದ್ದೇನೆ, ಇದು ಮಾಡಲಿಲ್ಲ ಅಂದ್ರೆ? ನಾವೇನಿಲ್ಲಿ ಬೋಳಿಸ್ಕೋಳ್ಳೋಕೆ ಕೂತಿದ್ದೀವಾ ಹಲ್ಕಾ ನನ್ಮಗನೆ’ ಸಬ್ ಇನ್‌ಸ್ಪೆಕ್ಟರ್ ಮಧ್ಯೆ ಪ್ರವೇಶಿಸಿ ಚೆನ್ನಾಗಿ ತದಕಿದರು. ಪೋಲಿಸರ ಲಾಠಿಯೇಟುಗಳ ನಡುವೆ ಅನೇಕ ಸತ್ಯಗಳನ್ನು ಪವನ್ ಬಿಚ್ಚಿದ್ದ. ಆದರೆ ಶೀಲಾಳ ಕೊಲೆಯನ್ನು ಸಂಪೂರ್ಣವಾಗಿ ನಿರಾಕರಿಸಿದ್ದಕ್ಕೆ ಅವನನ್ನು ಲಾಕಪ್ಪಿಗೆ ಎಸೆಯಲಾಯಿತು.

15

‘ತರಕಾರಿ ಚೀಲ ಕೋಟೆ ಮನೆಗೆ ಬಂದದ್ದು ಕಾರಣವಾಗಿ ದೀಪೂ ಮನೆಗೆ ಹಿಂತಿರುಗಿದ್ದನೆಂಬುದು ಸ್ಪಷ್ಟ’ ಎಂದು ಪ್ಲಾಂಟರ್ ಸೋಮಣ್ಣನವರು ತನ್ನ ಅನ್ವೇಷಣೆಯನ್ನು ಪ್ರೊ. ಭಾಸ್ಕರ್‌ರ ಮುಂದಿಟ್ಟರು. ಶೀಲಾಳ ಕೊಲೆಯಾದಂದು ಪೊಲೀಸರು ಮನೆಗೆ ಬೀಗ ಜಡಿದ ನಿಮಿತ್ತವಾಗಿ ಪ್ರೊ. ಭಾಸ್ಕರ್, ಸೋಮಣ್ಣನವರ ಗೆಸ್ಟ್ ಹೌಸ್‌ನ ಕೋಣೆಯಲ್ಲಿ ವಾಸ್ತವ್ಯ ಹೂಡಿದ್ದರು. ಮನೆಯನ್ನು ಪೊಲೀಸರು ಬಿಟ್ಟು ಕೊಟ್ಟಿದ್ದರೂ ಪ್ಲಾಂಟರ್ ಸೋಮಣ್ಣನವರು ಪ್ರೊ. ಭಾಸ್ಕರ್‌ರನ್ನು ಒಂಟಿಯಾಗಿ ಭಗವತಿ ಎಸ್ಟೇಟಿಗೆ ಕಳುಹಿಸಲಿಲ್ಲ. ಯಾವತ್ತೂ ಹೆದರದ ಪ್ರೊ. ಭಾಸ್ಕರ್‌ಗೆ ಶೀಲಾಳ ಕೊಲೆಯಾದಂದಿನಿಂದ ಅವರ ಮನೆ ಭೀತಿಯ ತಾಣವಾಗಿತ್ತು. ಪೊಲೀಸರ ಓಡಾಟ ಕಂಡ ಮೇಲಂತೂ ಅವರ ನಾಲಗೆಯೂ ಉಡುಗಿಹೋಗಿತ್ತು. ಪ್ಯಾಕೆಟುಗಟ್ಟಲೆ ಚಾರ್‌ಮಿನಾರ್, ಬಾಟಲುಗಟ್ಟಲೆ ಮದ್ಯದ ಮೂಲಕ ಪತ್ನಿಯ ಸಾವನ್ನವರು ಸ್ವೀಕರಿಸಿದ್ದರು.

ಡಾ. ಗಣೇಶ್ ಹಾಗೂ ನಟರಾಜ ಪಟ್ಟಣಶೆಟ್ಟರು ರಾತ್ರಿ ಬಹಳ ಹೊತ್ತನ್ನು ಪ್ರೊ. ಭಾಸ್ಕರ್ ಜೊತೆ ಕಳೆಯುತ್ತಿದ್ದರು. ಪ್ರೊ. ಭಾಸ್ಕರ್ ಸಾಧ್ಯವಾದಷ್ಟು ಏಕಾಂತವನ್ನು ಬಯಸುತ್ತಿದ್ದರು. ಎಲ್ಲಿಂದಲೋ ಬಂದ ದೀಪೂವಿಗೆ ತಾನು ಆಶ್ರಯ ಕೊಟ್ಟದ್ದು ತಪ್ಪಾಯಿತು. ಆತ ತನಗೆ ದ್ರೋಹ ಬಗೆದನೆಂಬ ಸಂದೇಹ ಅವರ ಮನಸ್ಸಿನಲ್ಲಿ ಬಲವಾಗಿ ಬೇರೂರಿರಬೇಕು; ವಿಪರೀತ ಅಮಲಾಗುತ್ತಿದ್ದಂತೆಯೆ ‘ಐ ವಿಲ್ ಕಿಲ್ ಹಿಮ್, ಐ ವಿಲ್ ಕಿಲ್ ಹಿಮ್’ ಅನ್ನುತ್ತಿದ್ದರು.

ನಟರಾಜ್ ಒಮ್ಮೆ ಕೇಳಿದರು. ‘ಯಾರ ಬಗ್ಗೆ ಹೇಳ್ತಾ ಇದ್ದೀರಾ?’

ಪ್ರೊ. ಭಾಸ್ಕರ್ ಅಮಲಿನ ನಡುವೆ ‘ದಟ್ ಬಾಸ್ಟರ್ಡ್’ ಅಂದರು.

‘ಪವನ್ ಈಗಾಗಲೇ ಸಿಕ್ಕಿಬಿದ್ದಿದ್ದಾನಲ್ಲ’ ನಟರಾಜ್ ಹೇಳಿದರು.

‘ನೊ, ಇದೆಲ್ಲ ದೀಪೂನದೇ ಅಟಾಟೋಪ. ದೀಪೂಗೆ ಪವನ್ ಗೊತ್ತು. ಅವರಿಬ್ರೂ ಸೇರಿಕೊಂಡೇ ಈ ಯೋಜನೆ ರೂಪಿಸಿಕೊಂಡಿದ್ದಾರೆ. ಅವ ಮನೆ ಕಾಯ್ತಿದ್ರೆ ಹೀಗಾಗ್ತಿತ್ತಾ? ಉಂಡ ಮನೆಗೆ ಕೇಡು ಬಗೆದದ್ದಲ್ವಾ ಅವ ಮಾಡಿದ್ದು!’

‘ನಾವದನ್ನು ನಿಧಾನವಾಗಿ ನೋಡಿಕೊಳ್ಳೋಣ. ನೀವು ವಿಶ್ರಾಂತಿ ತಗೊಳ್ಳಿ ಪ್ರೊ. ಭಾಸ್ಕರ್, ಪೊಲೀಸರಿದ್ದಾರೆ, ಕಾನೂನಿದೆ’.

‘ಬೇಡ, ಪೊಲೀಸರು ಬೇಡ. ಪೊಲೀಸರೆಂದರೆ ನನಗಾಗಲ್ಲ. ನಿಮಗಾಗದ್ದೇನೂ ಪೊಲೀಸರು ಮಾಡಲ್ವಲ್ಲ?’

‘ಕೊನೆಗಾದ್ರೂ ಪೊಲೀಸರು ಬೇಕೇ ಬೇಕಲ್ವ. ಹೋಗ್ಲಿ ಬಿಡಿ, ನೀವು ಮಲಕ್ಕೊಳ್ಳಿ, ಪ್ಲೀಸ್.’

ಪ್ರೊ. ಭಾಸ್ಕರ್ ಸೋಫಾದಲ್ಲೇ ಅಡ್ಡಾದರು. ಬಹಳ ಹೊತ್ತು ನಿದ್ದೆ ಹತ್ತಲಿಲ್ಲ. ವಿಪರೀತ ಚಳಿ. ಪ್ರೊ. ಭಾಸ್ಕರ್ ಗಡಗಡ ನಡುಗುತ್ತಿದ್ದುದನ್ನು ನೋಡಿ ಡಾ. ಗಣೇಶ್ ಒಳಗಿನಿಂದ ಒಂದು ಕಂಬಳಿ ತಂದು ಹೊದಿಸಿದರು. ಅಂದು ರಾತ್ರಿಯೂ ಡಾ. ಗಣೇಶ್ ಅಲ್ಲೇ ಇದ್ದರು. ನಟರಾಜ್ ತಮ್ಮ ಕೊಠಡಿಗೆ ಹೋಗಲೆಂದು ಎದ್ದು ನಿಂತಾಗ ಡಾ. ಗಣೇಶ್ ಕೂಡ ಎದ್ದು ಅವರೊಂದಿಗೆ ಹೆಜ್ಜೆ ಹಾಕಿದರು. ಪವನ್ ಸಿಕ್ಕಿಬಿದ್ದ ಪ್ರಕರಣವನ್ನು ಕುರಿತು ನಟರಾಜರು ಮಾತನಾಡುತ್ತಿದ್ದಂತೆಯೇ ಡಾ. ಗಣೇಶ್‌ರು, ‘ಪವನ್ ಬಹಳ ಅಪಾಯಕಾರಿ ವ್ಯಕ್ತಿ. ಅವನ ಬಗ್ಗೆ ಲಘುವಾಗಿ ತಿಳಿದುಕೊಳ್ಳುವಂತಿಲ್ಲ’ ಎಂದರು.

‘ಯಾರಂದ್ರು ಲಘುವಾಗಿ ತಿಳಿದುಕೊಂಡರೂಂತ?’ ಆತನಿಗೆ ಪೊಲೀಸ್ ಸ್ಟೇಷನ್‌ನಲ್ಲಿ ಚೆನ್ನಾಗಿ ಥಳಿಸಲಾಗಿದೆ. ಏರೋಪ್ಲೇನ್ ಎತ್ತಿಸಲಾಗಿದೆ. ಏನೇ ಆದರೂ ಆತ ಕಳ್ಳತನಕ್ಕಿಂತ ಒಂದು ಹೆಜ್ಜೆ ಮುಂದೆ ಹೋದಂತಿಲ್ಲ.’ ನಟರಾಜನ ಮಾತಿನಲ್ಲಿ ವ್ಯಕ್ತವಾಗುತ್ತಿದ್ದ ಅಸಹಾಯಕತೆಯನ್ನು ಡಾ. ಗಣೇಶ್ ಸಹಿಸದಾದರು. ತನ್ನ ಮನಸ್ಸಿನೊಳಗೆ ಕೆಲವು ದಿನಗಳಿಂದ ತುಡಿಯುತ್ತಿದ್ದ ವಿಚಾರವೊಂದನ್ನು ಹೇಳಲೆ ಬೇಡವೆ ಎಂದು ಹಿಂದೆ ಮುಂದೆ ನೋಡುತ್ತಿದ್ದರು. ಅದನ್ನು ಗಮನಿಸಿದ ನಟರಾಜ್, ‘ಪವನ್ ಬಗ್ಗೆ ನಿಮಗಿನ್ನೇನು ಗೊತ್ತು ಡಾ. ಗಣೇಶ್?’ ಎಂದು ಪ್ರಶ್ನಿಸಿದರು.

ಸ್ವಲ್ಪ ಯೋಚಿಸಿ ಡಾ. ಗಣೇಶ್ ಹೇಳತೊಡಗಿದರು: ‘ಅದೇ, ಆಗಿನ್ನೂ ಶೀಲಾಳ ಮದುವೆ ಆಗಿರಲಿಲ್ಲ. ಅದಕ್ಕೆ ಮೊದಲೇ ಪವನ್ ಜೊತೆಗೆ ಅವಳಿಗೆ ಅನೈತಿಕ ಸಂಬಂಧವಿತ್ತು. ಮದುವೆಗೆ ಮೊದಲೇ ಆಕೆ ತಾಯಿಯಾಗಿ ಬಿಡುತ್ತಿದ್ದಳು. ನಾನೇ ಆಕೆಯನ್ನು ವಿಪತ್ತಿನಿಂದ ಪಾರು ಮಾಡಿದೆ. ಪ್ರೊ. ಭಾಸ್ಕರ್‌ರಿಗೆ ಅದಿನ್ನೂ ಗೊತ್ತಿಲ್ಲ. ದಯವಿಟ್ಟು ಅವರಿಗೆ ತಿಳಿಸಬೇಡಿ. ಪವನ್ ಎಷ್ಟು ಕೆಟ್ಟವನಿದ್ದಾನೆ ಎಂಬುದನ್ನು ತಿಳಿಸಲಿಕ್ಕಷ್ಟೆ ಈ ಮಾತನ್ನು ತಿಳಿಸಿದೆ.’

‘ಅಂದ್ರೆ, ನೀವು ಹೇಳುವುದು, ಶೀಲಾರಿಗೆ ಪವನ್ ಜೊತೆ ಅನೈತಿಕ ಸಂಬಂಧ ಇತ್ತೂಂತ’.

‘ನೋ ಮಿ. ನಟರಾಜ್, ನಿಮಗೆ ಹಾಗೆ ಅರ್ಥವಾಗಿದ್ದರೆ ಕ್ಷಮಿಸಿ. ನನ್ನ ಉದ್ದೇಶ ಅದಾಗಿರಲಿಲ್ಲ. ಪವನ್‌ನ ದುಷ್ಟತನಕ್ಕೆ...’

‘ಓಕೆ. ಹಾಗೇ ಸುಮ್ಮನೆ ಹೇಳಿದೆ.’

‘ನಿಮಗೂ ಪೊಲೀಸರಿಗೂ ವಿಶೇಷ ಸಂಬಂಧವಿದ್ದಂತೆ ತೋರಿದ್ದಕ್ಕೆ ಪವನ್ ಬಗ್ಗೆ ಇಷ್ಟು ಮಾಹಿತಿ ಕೊಟ್ಟೆ’ ಎಂದರು ಡಾ ಗಣೇಶ್.

‘ನೀವು ತಿಳಿದುಕೊಂಡಂತೆ ಪೊಲೀಸರ ಜೊತೆ ನನಗೆ ಅಂಥ ಸಂಬಂಧವೇನೂ ಇಲ್ಲ. ನನ್ನ ರಿಸರ್ಚ್ ವ್ಯವಹಾರಕ್ಕಾಗಿ ಪೊಲೀಸರ ಜೊತೆ ಅಧಿಕೃತ ಸಂಬಂಧವಿರಿಸಿಕೊಂಡಿದ್ದೇನೆ. ಮೇಲಾಗಿ ಇಲ್ಲಿನ ಡಿ.ಎಸ್.ಪಿ. ಪುಟ್ಟಸೋಮೇಗೌಡರು ನನ್ನ ಸಹಪಾಠಿ.’

‘ಅಷ್ಟಿದ್ದರೆ ಪ್ರೊ. ಭಾಸ್ಕರ್‌ರ ದುಃಖಕ್ಕೆ ಕಿಂಚಿತ್ ಪರಿಹಾರವಾದರೂ ಲಭಿಸೀತು, ಅದೂ ನಿಮ್ಮ ಸಹಾಯದಿಂದ ಎಂಬುದು ನಿಸ್ಸಂದೇಹ’ ಎನ್ನುತ್ತಾ ಡಾ. ಗಣೇಶ್, ಪ್ರೊಫೆಸರ್ ನಿದ್ರೆಮಾಡಿದ್ದನ್ನು ಮತ್ತೊಮ್ಮೆ ಖಾತ್ರಿಪಡಿಸಿಕೊಳ್ಳಲು ಹಿಂದಿರುಗಿ ನೋಡಿದರು. ಪ್ರೊ. ಭಾಸ್ಕರ್ ಎದ್ದು ಕಿಟಿಕಿಯ ಬಳಿಗೆ ನಡೆದವರು ಅಲ್ಲೇ ನಿಂತು ಚಾರ್‌ಮಿನಾರ್ ಹೊತ್ತಿಸಿ ಹೊಗೆ ಉಗುಳುತ್ತಿದ್ದರು. ಇವರೇನು ನಿದ್ರಿಸೋ ಬಾಬತ್ತಲ್ಲ ಎಂದುಕೊಂಡ ಡಾ. ಗಣೇಶ್ ನಡೆ ಮುಂದುವರಿಸುತ್ತಾ ನಟರಾಜರ ಕೊಠಡಿ ತಲುಪಿದರು.

‘ಪ್ರೊ. ಭಾಸ್ಕರ್‌ರ ಕುಡಿತದ ಬಗ್ಗೆ ನೀವು ಸ್ವಲ್ಪ ನಿಗಾ ಇರಿಸಬೇಕು ಡಾ. ಗಣೇಶ್. ಮತ್ತೀ ಸಿಗರೇಟು, ಅದರ ಘಾಟು. ಯಾರಿಗಾದರೂ ತಡಕೊಳ್ಳೋದು ಅಸಾಧ್ಯ. ನನಗೆ ಅವರೊಂದಿಗೆ ಅಂಥ ಸಲುಗೆಯೇನೂ ಬೆಳೆದಿಲ್ಲ. ಮೇಲಾಗಿ ನೀವು ಅವರ ಆತ್ಮೀಯರು. ನೀವು ಹೇಳೋದೇ ಚೆನ್ನಾಗಿರುತ್ತೆ’ ಎಂದು ನಟರಾಜ್ ಹೇಳಿದರು.

‘ಈ ಬಗ್ಗೆ ನನಗೂ ಚಿಂತೆಯಾಗಿದೆ. ಅವರ ಅಮ್ಮ ಬಂದು ಮನೆಗೆ ಹೋಗೋಣ ಅಂದ್ರು, ಚಂದ್ರಪ್ಪ ಅಂಕಲ್, ನನ್ನ ಜೊತೆಗಾದರೂ ಬಾ’ ಅಂದ್ರು. ಯಾವುದಕ್ಕೂ ತುಟಿಪಿಟಿಕ್ಕೆನ್ನಲಿಲ್ಲ. ಅವರ ಮನಸ್ಸಿನ ಒಳಗೆ ಏನಿದೆಯೊ ಅರ್ಥವಾಗುವುದಿಲ್ಲ’ ಡಾ. ಗಣೇಶ್ ಕಳವಳ ವ್ಯಕ್ತಪಡಿಸಿದರು.

‘ಇನ್ನೂ ಒಂದೆರಡು ದಿನ ನಾನು ಗೆಸ್ಟ್ ಹೌಸಲ್ಲಿರಬಹುದು. ಅಷ್ಟು ದಿನ ನನ್ನಿಂದಾದಷ್ಟು ಎಚ್ಚರ ವಹಿಸಬಹುದು. ಆಮೇಲೆ ನಾನು ದೆಹಲಿಗೆ ಹೊರಟು ಹೋಗ್ತೇನೆ. ಇಷ್ಟಾಗಿಯೂ ನಾನು ಹೇಳಿದರೆ ಕೇಳುತ್ತಾರೆಂಬ ಗ್ಯಾರಂಟಿಯೇನು?’ ಅದು ನಟರಾಜರ ಸಂದೇಹ.

‘ನನಗೆ ಹೀಗನ್ನಿಸ್ತದೆ. ಉಪಾಯ ಮಾಡಿ ನನ್ನ ಮನೆಗೇ ಕರೆಸಿಕೊಳ್ತೇನೆ, ಅಲ್ಲಿ ಅತಿಯಾಗಿ ಕುಡಿಯೋದಕ್ಕೆ ಅವಕಾಶವಿರೋದಿಲ್ಲ. ಲ್ಯಾಬ್ ವ್ಯವಹಾರದಲ್ಲಿ ಸದ್ಯಕ್ಕೆ ತೊಡಗಿಕೊಳ್ಳುವುದು ಅವರಿಂದಾಗದು. ಮನೆಯಲ್ಲಿ ಮಗುವಿನ ಜೊತೆಗಾದರೂ ಹೊತ್ತುಹೋದೀತು. ನಾಳೇನೆ ಕರೆದುಕೊಂಡು ಹೋಗ್ತೇನೆ’.

ಡಾ. ಗಣೇಶರಿಗೆ ಹೊಳೆದ ಉಪಾಯಕ್ಕೆ ನಟರಾಜ್ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ